

ಯಾರೊಡನೆಯೂ ಹೇಳಿಕೊಳ್ಳಲಾಗದ ಲೈಂಗಿಕ, ದಾಂಪತ್ಯ ಮತ್ತು ಮಾನಸಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸುವ ಅಂಕಣವಿದು. ನೀವೂ ನಿಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು.

**ಡಾ. ವಿನೋದ ಛೆಬ್ಬಿ**
ಲೈಂಗಿಕ, ದಾಂಪತ್ಯ ಮತ್ತು ಮನೋಚಿಕಿತ್ಸಕರು

ಮಹಿಳೆ, ವಯಸ್ಸು 56. ಒಬ್ಬಳೇ ಮಗಳಿಗೆ (22) ಮದುವೆಯಾಗಿದೆ. ಇತ್ತೀಚೆಗೆ ಅವಳಿಗೆ ಅಬಾರ್ಷನ್ ಆದಾಗ ವೈದ್ಯರು ಒಂದೆರಡು ವರ್ಷ ಸಂಭೋಗ ಮಾಡಬಾರದೆಂದು ಸಲಹೆ ಕೊಟ್ಟಿದ್ದಾರೆ. ಮಗಳು ಆಸ್ಪತ್ರೆಯಲ್ಲಿದ್ದಾಗ ಅಳಿಯಂದಿರು (26) ಕೇಳಿಕೊಂಡಿದ್ದರಿಂದ ಅವರಿಗೆ ಮೈ ಉಜ್ಜಿ ಸ್ನಾನ ಮಾಡಿಸಿದೆ. ಆಗ ಅವರು ತಮಗೆ ದಪ್ಪ ಹೆಂಗಸೆಂದರೆ ಇಷ್ಟವೆಂದೂ, ನನ್ನ ಅಭ್ಯಂತರ ಇಲ್ಲದಿದ್ದರೆ ನನ್ನ ಜೊತೆಗೆ ಮಲಗುತ್ತೇನೆಂದೂ, ಇದಕ್ಕೆ ನನ್ನ ಮಗಳ ಅಭ್ಯಂತರ ಇಲ್ಲವೆಂದೂ ಹೇಳಿದರು. ನನಗೆ ಗಾಬರಿಯಾಗಿ ಪತಿಗೆ ಹೇಳಿ, ಇಬ್ಬರೂ ಮಗಳನ್ನು ವಿಚಾರಿಸಿದಾಗ ಅವಳು ತನ್ನ ಗಂಡನದು ಮಗುವಿನ ಮನಸ್ಸೆಂದೂ, ತನ್ನಲ್ಲಿ ಸಿಗದಿರುವ ಸುಖ ನನ್ನಿಂದ ಸಿಕ್ಕರೆ ಅದಕ್ಕೆ ಅಭ್ಯಂತರವಿಲ್ಲವೆಂದೂ ತಿಳಿಸಿದಳು. ನಾವಿಬ್ಬರೂ ಬಹಳ ಚರ್ಚಿಸಿದೆವು. ಒಬ್ಬಳೇ ಮಗಳ ಜೀವನಕ್ಕೆ ತೊಂದರೆಯಾಗಬಾರದೆಂದು ನಾನು ಮನಸ್ಸಿಲ್ಲದಿದ್ದರೂ ಒಪ್ಪಿಕೊಂಡೆ. ನಮ್ಮ ಅಳಿಯನದು ವಿಚಿತ್ರ ಬಯಕೆ ಅನ್ನಿಸುತ್ತದೆ. ಸಂಭೋಗ ಮಾಡುವಾಗ ಆಂಟಿ ನೋವಾಗುತ್ತದೆಯೇ ಎಂದು ಪದೇ ಪದೇ ಕೇಳುತ್ತಾರೆ. ಹಲವು ಸಲ ನನ್ನ ಎದೆಯ ಮೇಲೆ ಮಲಗಿ ಮಗುವಿನಂತೆ ನಿದ್ರಿಸುತ್ತಾರೆ. ಬೇರೆ ಯಾವ ತೊಂದರೆಯೂ ಇಲ್ಲ. ನನ್ನ ಗಂಡನಿಗೆ ಹೇಳಿದಾಗ ಮನೋವೈದ್ಯರಲ್ಲಿ ತೋರಿಸಬೇಕೆಂದು ಅನ್ನುತ್ತಾರೆ. ದಯವಿಟ್ಟು ಪರಿಹಾರ ತಿಳಿಸಿ

ಈ ಪ್ರಸಂಗದಲ್ಲಿ ಪ್ರತಿಯೊಬ್ಬರಲ್ಲೂ ಮತ್ತು ಪ್ರತಿ ಹಂತದಲ್ಲೂ ಬುದ್ಧಿ–ವಿವೇಚನೆ– ತರ್ಕ ದಾರಿ ತಪ್ಪಿದೆ ಎಂದು ನಿಸ್ಸಂದೇಹವಾಗಿ ಹೇಳಬಹುದು. ಉದಾಹರಣೆಗೆ, 1) ಮಹಿಳಾ ವೈದ್ಯರು: ಸಂಭೋಗ ಬೇಡವೆನ್ನುವುದರ ಬದಲು ಗರ್ಭಧಾರಣೆ ಸದ್ಯಕ್ಕೆ ಬೇಡವೆಂದು ಸ್ಪಷ್ಟಪಡಿಸಬಹುದಿತ್ತು. ಇಲ್ಲದಿದ್ದರೆ ಸಂಭೋಗದಿಂದ ಗರ್ಭಕೋಶಕ್ಕೆ ತೊಂದರೆಯಾಗುತ್ತದೆ ಎಂದು ಅನೇಕರು ತಪ್ಪು ತಿಳಿಯುತ್ತಾರೆ. ಅಲ್ಲದೆ ಗರ್ಭನಿರೋಧಕಗಳ ಬಗೆಗೆ ಮಾಹಿತಿ ಕೊಡಬಹುದಿತ್ತು. 2) ನಿಮ್ಮ ಮಗಳು: ವೈದ್ಯರು ಗರ್ಭಧಾರಣೆ ಬೇಡವೆಂದು ತಿಳಿಸಿರುವಾಗ ಸಂಭೋಗವೇ ಬೇಡವೆಂದು ತಪ್ಪು ತಿಳಿದಿರಬಹುದು. ಒಂದುವೇಳೆ ಸಂಭೋಗ ಬೇಡವೆಂದರೆ ಸರಸ, ಮುಖಮೈಥುನ, ಪರಸ್ಪರ ಹಸ್ತಮೈಥುನ ಮುಂತಾದವುಗಳಿಂದ ಗಂಡನನ್ನು ತೃಪ್ತಿ ಪಡಿಸಬಹುದಿತ್ತು. 3) ನಿಮ್ಮ ಪತಿ: ಒಬ್ಬಳೇ ಮಗಳ ಜೀವನಕ್ಕೆ ತೊಂದರೆ ಆಗುತ್ತದೆ ಎಂಬುದನ್ನು ಯಾವ ಆಧಾರದ ಮೇಲೆ ನಿರ್ಧರಿಸಿದರು? ಗರ್ಭಪಾತವಾದ ಹೆಚ್ಚಿನ ಮಹಿಳೆಯರ ಗಂಡಂದಿರು ಇತರ ಹೆಣ್ಣಿನ ಸಹವಾಸ ಇಟ್ಟುಕೊಂಡಿದ್ದಾರೆಯೆ? 4) ನೀವು: ಮಗಳು ಒಪ್ಪಿದರೂ ನೀವು ಒಪ್ಪುವ ಅಗತ್ಯವೇನಿತ್ತು? ನೀವೇ ಮಹಿಳಾ ವೈದ್ಯರ ಹತ್ತಿರ ಇನ್ನೊಂದು ಸಲ ಮಾತಾಡಬಹುದಿತ್ತಲ್ಲವೆ? ಹೋಗಲಿ, ಅಳಿಯನ ಕಾಮಾಭಿಲಾಷೆಯನ್ನು ಹೆಂಡತಿ ಮನೆಗೆ ಬರುವ ತನಕ ತಡೆದುಕೊಳ್ಳಲು ಬುದ್ಧಿ ಹೇಳಬಹುದಿತ್ತಲ್ಲವೆ? ಅಳಿಯನದು ಮಗುವಿನ ಸ್ವಭಾವವಿದ್ದರೆ ನೀವೇಕೆ ತಾಯಿಯ ಸ್ಥಾನದಲ್ಲಿ ನಿಂತು ಉಪದೇಶಿಸಲಿಲ್ಲ? 5) ಅಳಿಯ: ದಪ್ಪ ಹೆಂಗಸರನ್ನು ಕಂಡರೆ ಇಷ್ಟವಾಗುವವನು ಅಂಥವಳನ್ನೇ ಮದುವೆಯಾಗಬಹುದಿತ್ತು; ತೆಳ್ಳಗಿರುವವಳನ್ನು ಯಾಕೆ ಮದುವೆಯಾದ? ಹೆಂಡತಿ ಆಸ್ಪತ್ರೆಯಿಂದ ಮರಳುವ ತನಕ ಯಾಕೆ ಕಾಯಲಿಕ್ಕಾಗಲಿಲ್ಲ? ಮಗುವಿನ ಸ್ವಭಾವವಿದ್ದರೆ ನಿಮ್ಮನ್ನು ತನ್ನ ತಾಯಿಯ ಸ್ಥಾನದಲ್ಲಿ ಕಲ್ಪಿಸಿಕೊಂಡು ಅಚ್ಚುಮಗನಾಗಿ ವರ್ತಿಸಬಹುದಿತ್ತು. ಸಂಭೋಗದ ಆಲೋಚನೆ ಆತನಿಗೆ ಹೇಗೆ ಬಂತು? ಇನ್ನು, ಈ ವ್ಯವಸ್ಥೆಯ ಪರಿಣಾಮ ಹಾಗೂ ಅದರಿಂದ ಹುಟ್ಟುವ ಸಮಸ್ಯೆಗಳು: 1) ನಿಮ್ಮ ದಪ್ಪ ಶರೀರಸುಖದ ರುಚಿಕಂಡು ನಿಮ್ಮಳಿಯ ನಿಮಗೇ ಅಂಟಿಕೊಳ್ಳುವ ಸಂಭವವಿದೆ. ಆಗ ಏನು ಮಾಡುವಿರಿ? ತಾಯಿಮಗಳಿಬ್ಬರೂ ಆತನೊಡನೆ ಮಲಗುವಿರಾ? 2) ಅವನು ನಿಮಗೆ ಮಾತ್ರ ಅಂಟಿಕೊಳ್ಳುತ್ತ ಹೆಂಡತಿಯನ್ನು ನಿರಾಕರಿಸುವ ಸಂಭವವೂ ಇದೆ. ಆಗ ಅವನ ಜೊತೆ ಕಾಯಂ ಸಂಬಂಧವಿಟ್ಟುಕೊಳ್ಳುವಿರಾ? ಅಥವಾ ಮಗಳನ್ನು ದಪ್ಪ ಮಾಡಿ ಅವಳ ಆರೋಗ್ಯ ಹಾಳುಮಾಡುತ್ತೀರಾ? ಅಥವಾ ಇನ್ನೊಬ್ಬಳು ದಪ್ಪ ಹೆಣ್ಣನ್ನು ಅವನಿಗೆ ಕಟ್ಟುತ್ತೀರಾ? 3) ವ್ಯಾವಹಾರಿಕವಾಗಿ ಅವನ ಜೊತೆಗೆ ಯಾವ ಸ್ತರದಲ್ಲಿ ವರ್ತಿಸುವಿರಿ? ಅತ್ತೆ–ಅಳಿಯ ಅಥವಾ ಪ್ರೇಯಸಿ– ಪ್ರಿಯಕರ? 4) ಕ್ರಮೇಣ ನೀವೂ ಅವನನ್ನು ಬಯಸಲು ಶುರುಮಾಡುವಿರಿ (ಇದೀಗಾಗಲೇ ಶುರುವಾಗಿರಬಹುದೆ?). ಆಗ ಮಗಳಲ್ಲಿ ನಿಮ್ಮ ಬಗೆಗೆ ಮತ್ಸರ ಮೂಡಬಹುದು. ಮಗಳಿಗೆ ಪ್ರತಿಸ್ಪರ್ಧಿಯಾಗುವಿರಾ? ಮಗಳ ದಾಂಪತ್ಯ ಉಳಿಸಲು ಹೋಗಿ ಹಾಳುಮಾಡಿದಂತೆ ಆಗುವುದಿಲ್ಲವೆ? ಇನ್ನು ಪರಿಹಾರ: 1) ಈ ಕ್ಷಣದಿಂದಲೇ ನಿಮ್ಮ ಅತ್ತೆ–ಅಳಿಯನ ಸಂಬಂಧಕ್ಕೆ ನಿಷೇಧ ಹಾಕಿ. ಪತಿಯೊಡನೆ ಅವನನ್ನು ದೂರ ಕೂಡಿಸಿಕೊಂಡು ತಿಳಿಹೇಳಿ. ಆತನದು ಎಷ್ಟೊಂದು ಮಗುವಿನ ಸ್ವಭಾವವೆಂದರೆ ತಾಯಿಯ ಸ್ಥಾನದ ಅತ್ತೆಗೂ ಹೆಂಡತಿಗೂ ವ್ಯತ್ಯಾಸ ಅರಿವಾಗುತ್ತಿಲ್ಲವೆಂಬುದನ್ನು ಸ್ಪಷ್ಟಪಡಿಸಿ. ಹಾಗೆಯೇ ನಿಮ್ಮೆಲ್ಲರ ಮನೋಭಾವ, ಆಲೋಚನಾ ರೀತಿ ಮತ್ತು ಪರಿಹರಿಸುವ ರೀತಿಯಲ್ಲಿಯೂ ದೋಷಪೂರಿತವಾಗಿದೆ ಎಂದು ಒಪ್ಪಿಕೊಳ್ಳಿ. ಸಮಸ್ಯೆ ಗಂಭೀರವಾಗಿದ್ದು, ಕುಟುಂಬದ ಎಲ್ಲ ಸದಸ್ಯರನ್ನು ಒಳಗೊಂಡಿರುವುದರಿಂದ ಇಡೀ ಕುಟುಂಬಕ್ಕೆ ಕುಟುಂಬ ಚಿಕಿತ್ಸೆ, ಮಗಳು–ಅಳಿಯನಿಗೆ ದಾಂಪತ್ಯ ಚಿಕಿತ್ಸೆ, ಹಾಗೂ ಅಳಿಯನಿಗೆ ಮನೋಚಿಕಿತ್ಸೆ ಬೇಕೇಬೇಕು. ಅದಕ್ಕಾಗಿ ಎಲ್ಲರೂ ಮನೋಲೈಂಗಿಕ ತಜ್ಞರನ್ನು ಕಾಣುವ ಅಗತ್ಯವಿದೆ. ಸಹಾಯಕ್ಕಾಗಿ ಬೆಂಗಳೂರಿನ ಮೆಡಿಸೆಕ್ಸ್ ಫೌಂಡೇಶನ್ ಸಂಸ್ಥೆಯನ್ನು (ದೂ. 080 23101205, 23111666) ಸಂಪರ್ಕಿಸಿ. ಇನ್ನು, ಮಹಿಳಾ ವೈದ್ಯರಿಗೊಂದು ಸಲಹೆ: ಗರ್ಭಧಾರಣೆ ಬೇಡವೆಂದು ಸಲಹೆ ಕೊಡುವುದರ ಜೊತೆಗೆ ಗರ್ಭ ನಿರೋಧದ ಕ್ರಮಗಳನ್ನೂ ಹೇಳಿಕೊಟ್ಟರೆ ಕುಟುಂಬವನ್ನು ಇಂಥ ಅನಾಹುತಗಳಿಂದ ಪಾರುಮಾಡಿದ ಪುಣ್ಯ ನಿಮಗೆ ಬಂದೀತು!

ನನ್ನ ಮೊಮ್ಮಗನ ಶಿಶ್ನವು ಜನ್ಮದಿಂದಲೇ ಕುಂಠಿತವಾಗಿದೆ. ಮಕ್ಕಳ ತಜ್ಞರಿಗೆ ತೋರಿಸಿದಾಗ ಅವರು ಶಿಶ್ನವು ಬರಬರುತ್ತ ಅಭಿವೃದ್ಧಿ ಹೊಂದುತ್ತದೆ ಎಂದು ಹೇಳಿದ್ದರು. ಈಗ ಅವನಿಗೆ 6 ವರ್ಷವಾದರೂ ಯಾವ ಬದಲಾವಣೆಯಿಲ್ಲ. ಚಿಕಿತ್ಸಾ ಮಾರ್ಗ ಅಥವಾ ಚಿಕಿತ್ಸಕರ ಹೆಸರು, ವಿಳಾಸಗಳನ್ನು ತಿಳಿಸಿ.

ಅನೇಕ ಹುಡುಗರ ಜನನಾಂಗದ ಬೆಳವಣಿಗೆ 12 ವಯಸ್ಸಿನ ತರುವಾಯ ಶುರುವಾಗಿ ಶೀಘ್ರವೇ ಆರೋಗ್ಯಕರ ಮಟ್ಟವನ್ನು ಮುಟ್ಟುತ್ತದೆ. ನಿಮ್ಮ ಮೊಮ್ಮಗನಲ್ಲಿ ಏನೂ ತೊಂದರೆಯಿಲ್ಲವೆಂದು ತಜ್ಞರು ತಿಳಿಸಿದ್ದಾರೆಂದರೆ ಏನೂ ತೊಂದರೆ ಇಲ್ಲವೆಂದೇ ಅರ್ಥ. ಬೇಕೆಂದರೆ ಈ ಅಂಶಗಳನ್ನು ಪರೀಕ್ಷಿಸಿ ಖಚಿತಪಡಿಸಿಕೊಳ್ಳಿ: 1) ಅವನ ವೃಷಣಬೀಜಗಳು ಆಗಾಗ ಉದರದಿಂದ ಹೊರಗಿಳಿದು ನೇತಾಡುತ್ತವೆಯೆ? 2) ಅವನು ತೆಳ್ಳಗಿದ್ದು ವಯಸ್ಸಿಗೆ ತಕ್ಕಂತೆ ಎತ್ತರ ಬೆಳೆಯುತ್ತಿದ್ದಾನೆಯೆ? ಇವು ಸರಿಯಿದ್ದರೆ ಅವನು ಆರೋಗ್ಯಕರದಿಂದ ಇದ್ದಾನೆ ಎಂದರ್ಥ. ಒಂದುವೇಳೆ ದಪ್ಪಗಿದ್ದರೆ ಶಿಶ್ನದ ಸ್ವಲ್ಪ ಭಾಗವು ಉದರದ ಕೊಬ್ಬಿನಲ್ಲಿ ಅಡಗಿಕೊಂಡು ಹೊರಗಡೆ ಕಾಣಲಿಕ್ಕಿಲ್ಲ. ಹಾಗಿದ್ದರೆ ಅವನಿಗೆ ಹೆಚ್ಚು ಆಟವಾಡಿ ತೂಕ ಕಳೆದುಕೊಳ್ಳಲು ಪ್ರೋತ್ಸಾಹಿಸಿ. ಇಷ್ಟಕ್ಕೂ ಸಮಾಧಾನವಾಗದಿದ್ದಲ್ಲಿ ತಜ್ಞರಿಗಾಗಿ ಲೈಂಗಿಕ ಸಹಾಯವಾಣಿಯಲ್ಲಿ ವಿಚಾರಿಸಿ.

ಲೈಂಗಿಕ ಸಹಾಯವಾಣಿ: ಲೈಂಗಿಕ ಸಮಸ್ಯೆಗಳ ತುರ್ತು ಪರಿಹಾರಕ್ಕಾಗಿ ಡಾ. ವಿನೋದ ಛೆಬ್ಬಿಯವರನ್ನು ಪ್ರತಿ ಮಂಗಳವಾರ ಮತ್ತು ಶುಕ್ರವಾರ ಮಧ್ಯಾಹ್ನ 2ರಿಂದ 4ರ ತನಕ ಬೆಂಗಳೂರಿನ ದೂರವಾಣಿಯ ಸಂಖ್ಯೆ (080) 23111666 ಅಥವಾ 23101205ರ ಮೂಲಕ ಸಂಪರ್ಕಿಸಬಹುದು. ದೂರವಾಣಿಯ ಸಂಪರ್ಕ ಸಿಗದಿದ್ದಲ್ಲಿ ಪತ್ರದ ಮೂಲಕ ತಮ್ಮ ಮೊಬೈಲ್ ಸಂಖ್ಯೆಯನ್ನು ತಿಳಿಸಿ ವೈದ್ಯರ ಉತ್ತರಕ್ಕಾಗಿ ಕಾಯಬಹುದು. ಅಥವಾ www.medisex.org ಪರಿಶೀಲಿಸಬಹುದು.

**ನಿಮ್ಮ ಪ್ರಶ್ನೆಗಳನ್ನು ಸಂಪಾದಕರು, 'ಸುಧಾ' 'ಸುಖೀಭವ' ವಿಭಾಗ, ನಂ. 75 ಎಂ.ಜಿ. ರಸ್ತೆ, ಬೆಂಗಳೂರು–01 ವಿಳಾಸಕ್ಕೆ ಕಳುಹಿಸಿ**